ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.

ಉಪಸ್ಥಿತಿಃ ಶ್ರೀ ಸಂತೋಷ್ ಶ್ರೀ ವಾಸ್ತವ್

ಸಿಸಿ.ಸಂಖ್ಯೆ .1339/2024

ಪಿರ್ಯಾದುದಾರಃ ಸರ್ಕಾರದ ಪರ ಪಡುಬಿದ್ರಿ ಠಾಣಾ
ಆರಕ್ಷಕ ಉಪನಿರೀಕ್ಷಕರು

ವಿರುದ್ಧ

ಆರೋಪಿ ಃ ಇಮ್ತಿಯಾಜ್

ದಂಡಪ್ರಕ್ರಿಯಾ ಸಂಹಿತೆಯ ಕಲಂ 313 ರ ರೀತಿಯ ಆರೋಪಿಯವರ ಹೇಳಿಕೆ

ಪ್ರಃ 1 ನ್ಯಾಯಾಲಯದಲ್ಲಿ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಮತ್ತು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ಕೇಳಿ ತಿಳಿದುಕೊಂಡಿದ್ದೀರಾ?

ಉಃ

ಪ್ರಃ 2 ಅ.ಸಾ.1 ರಮೇಶ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20-10-2016 ರಂದು ಸುಮಾರು 10.45 ರ ಸಮಯಕ್ಕೆ ನನ್ನ ಅತ್ತೆಯವರಾದ ಗೋಪಿಯವರನ್ನು ಕರೆದುಕೊಂಡು ತೆಂಕ ಎರ್ಮಾಳಿಗೆ ಹೋದೆವು. ನಮ್ಮ ಅತ್ತೆಯನ್ನು ತೆಂಕ ಎರ್ಮಾಳಿನ ಸೊಸೈಟಿಯ ಬಳಿ ಬಿಟ್ಟು ರಸ್ತೆಯ ಇನ್ನೊಂದು ಬದಿಗೆ ಹೋದಾಗ ನಮ್ಮ ಅತ್ತೆಯವರು ಕೆಳಗೆ ಬಿದ್ದಿದ್ದರು. ನಾನು ಸ್ಥಳಕ್ಕೆ ಬಂದು ನೋಡಿದಾಗ ಅಲ್ಲಿ ಬಿದ್ದಿದ್ದ ಮಹಿಳೆಯು ನನ್ನ ಅತ್ತೆಯಾಗಿದ್ದರು ಅವರಿಗೆ ಅಪಘಾತವಾಗಿತ್ತು. ಅವರ ತಲೆಗೆ ಪೆಟ್ಟಾಗಿತ್ತು ಜನರು ಅವರನ್ನು ಉಪಚರಿಸುತ್ತಿದ್ದರು. ನಂತರ ಕಾಪುವಿನ ಪ್ರಶಾಂತ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದೆನು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಬಂದು 3 ತಿಂಗಳ ಕಾಲ ಚಿಕಿತ್ಸೆ ಕೊಡಿಸಿದೆವು. ನಂತರ ಅವರು ತೀರಿಕೊಂಡರು. ಅಪಘಾತವನ್ನು ಕುರಿತು ದೂರನ್ನು ನೀಡಿರುತ್ತೇನೆ.

ಅದೇ ದಿನ ಪೊಲೀಸಿನವರು ಅಪಘಾತವಾಗಿದ್ದ ಸ್ಥಳಕ್ಕೆ ಸಂಜೆಯ ವೇಳೆ ಬಂದಿದ್ದರು. ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಒಂದು ನಕ್ಷೆಯನ್ನು ತಯಾರಿಸಿರುತ್ತಾರೆ. ಅವುಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ.

ಅಪಘಾತವು ಮಾರುತಿ ಇಕೋ ವಾಹನದಿಂದ ಆಗಿರುತ್ತದೆ. ಸಾಕ್ಷಿಯವರು 2 ಭಾವಚಿತ್ರಗಳನ್ನು ನೋಡಿ ಅವುಗಳಲ್ಲಿ ಕಾಣುವ ವಾಹನವು ಅಪಘಾತಪಡಿಸಿದ ವಾಹನವೆಂದು ಗುರುತಿಸಿರುತ್ತಾರೆ. ಆರೋಪಿಯವರನ್ನು ಅಪಘಾತವಾದ ಸ್ಥಳದಲ್ಲಿ ನೋಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರ: 3 ಅಸಾ 2 ನರೇಂದ್ರ ಎ. ಕೆ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ 1 ಮತ್ತು ಮೃತ ಗೋಪಿರವರ ಪರಿಚಯ ಇರುತ್ತದೆ. ದಿನಾಂಕ 10-03-2016 ರಂದು ರಾಷ್ಟ್ರೀಯ ಹೆದ್ದಾರಿಯ ಪೂರ್ವ ಭಾಗದಲ್ಲಿ ತೆಂಕ ಎರ್ಮಾಳಿನ ಸೊಸೈಟಿಯ ಬಳಿ ಅಟೋವನ್ನು ನಿಲ್ಲಿಸಿ ಅಂಗಡಿಗೆ ಹೋಗಿದ್ದ ಪ್ರಯಾಣಿಕರನ್ನು ಕಾಯುತ್ತಾ ನಿಂತಿದ್ದ ಸಮಯದಲ್ಲಿ ರಸ್ತೆಯ ಇನ್ನೊಂದು ಬದಿಯಿಂದ ಸದ್ದು ಕೇಳಿಸಿತು. ನಾನು ಹೋಗಿ ನೋಡಿದಾಗ ಗೋಪಿಯವರು ಅಪಘಾತವಾಗಿ ಕೆಳಗೆ ಬಿದ್ದಿದ್ದರು. ಅವರ ತಲೆಗೆ ಪೆಟ್ಟು ಆಗಿತ್ತು. ನಂತರ ಗೋಪಿಯವರನ್ನು ಕಾಪುವಿನ ಪ್ರಶಾಂತ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದೆವು, ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾನು ಆಸ್ಪತ್ರೆಯಿಂದ ಮನೆಗೆ ಬಂದೆನು. ಅದೇ ದಿನ ಸಂಜೆ ಪಂಚನಾಮೆಗೆ ನನ್ನನು ಕರೆದಿದ್ದರು ಸ್ಥಳವನ್ನು ತೋರಿಸಿದೆನು ನಂತರ ಪೊಲೀಸಿನವರು ಪಂಚನಾಮೆಯನ್ನು ಮತ್ತು ನಕ್ಷೆ ತಯಾರಿಸಿದರು. ಅವುಗಳಿಗೆ ನಾನು ಸಹಿ ಮಾಡಿರುತ್ತೇನೆ.

ಗೋಪಿಯವರು ಸುಮಾರು 3 ತಿಂಗಳ ಕಾಲ ಆದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಮೃತ ಪಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉಃ

ಪ್ರಃ 4 ಅಸಾ 3 ದಯಾಕರರವರು ತಮ್ಮ ಸಾಕ್ಷ್ಯದಲ್ಲಿ ರಮೇಶ್ ಮತ್ತು ನರೇಂದ್ರ ರವರ ಪರಿಚಯ ಇದೆ. ಸುಮಾರು 9 ವರ್ಷದ ಹಿಂದೆ ನನ್ನ ತಾಯಿಯವರಾದ ಗೋಪಿ ಬೆಳ್ಚಡ ರವರು ತೆಂಕ ಎರ್ಮಾಳಿನಲ್ಲಿ ಆದ ಅಪಘಾತದಲ್ಲಿ ಮೃತರಾಗಿರುತ್ತಾರೆ. ಈ ವಿಚಾರವನ್ನು ನನಗೆ ರಮೇಶ್ ಮತ್ತು ನರೇಂದ್ರ ರವರು ತಿಳಿಸಿದರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉಃ

ಪ್ರಃ 5 ಅಸಾ 5 ಜಗದೀಶ ಶೆಟ್ಟಿಯವರು ತಮ್ಮ ಸಾಕ್ಷ್ಯದಲ್ಲಿ ದಿಃ 10-03-2016 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ಲಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 63/2013 ರಂತೆ ಭಾರತೀಯ ದಂಡ ಸಂಹಿತೆಯ ಕಲಂ 279 ಮತ್ತು 338 ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿದೆನು. ಮೇಲಾಧಿಕಾರಿಯವರ ನಿರ್ದೇಶನದ ಮೇರೆಗೆ ದಿಃ 10-03-2016 ರಂದು ಘಟನಾ ಸ್ಥಳಕ್ಕೆ ಬೇಟಿ ಕೊಟ್ಟು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ

3 ಮತ್ತು 5 ರವರನ್ನು ಪಂಚರಾಗಿ ಮಾಡಿಕೊಂಡು ಸಂಜೆ 5.30 ರಿಂದ ಸಂಜೆ 6.15 ರ ವರೆಗೆ ಪಂಚನಾಮೆಯನ್ನು ಜರುಗಿಸಿದೆನು. ಅದೇ ವೇಳೆ ಸ್ಥಳದಲ್ಲಿ ಕರಡು ನಕಾಶೆಯನ್ನು ತಯಾರಿಸಿದೆನು.

ಮರುದಿನ ವಾಹನದ ಮಾಲೀಕರಿಗೆ ಮೋಟಾರ್ ವಾಹನ ಕಾಯ್ದೆಯ ಕಲಂ 133 ರ ಅಡಿಯಲ್ಲಿ ನೋಟೀಸು ನೀಡಿದೆನು. ನೋಟೀಸಿಗೆ ವಾಹನದ ಮಾಲೀಕರಾದ ಇಲಿಯಾಸ್ ರವರು ನೋಟೀಸಿಗೆ ಉತ್ತರವನ್ನು ನೀಡಿದರು. ತಮ್ಮ ಉತ್ತರದಲ್ಲಿ ಅಪಘಾತವಾದ ಸಮಯದಲ್ಲಿ ಇಮ್ತಿಯಾಸ್ ರವರು ಚಾಲನೆ ಮಾಡುತ್ತಿದ್ದರೆಂದು ತಿಳಿಸಿದರು.

ವಾಹನದ ಮಾಲೀಕರು ಕೆಎ 19 ಎಂಡಿ 1384 ವಾಹನವನ್ನು ಠಾಣೆಗೆ ತಂದು ಹಾಜರು ಪಡಿಸಿದ್ದು ಚಾಸಾ 6 ರವನ್ನು ಪಂಚರನ್ನಾಗಿ ಮಾಡಿಕೊಂಡು ಬೆಳಿಗ್ಗೆ 11.05 ರಿಂದ 11.30 ರ ವರೆಗೆ ಪಂಚನಾಮೆಯನ್ನು ಜರುಗಿಸಿ ಜಪ್ತು ಮಾಡಿಕೊಂಡೆನು. ಸಾಕ್ಷಿಯವರು ಎರಡು ಭಾವಚಿತ್ರವನ್ನು ನೋಡಿ ಇದೇ ವಾಹನ ಎಂದು ಗುರುತಿಸಿರುತ್ತಾರೆ. ಅದೇ ದಿನ ವಾಹನದ ಮಾಲೀಕರಿಂದ ನಷ್ಟ ಭರ್ತಿ ಮುಚ್ಚಳಿಕೆಯನ್ನು ಪಡೆದುಕೊಂಡು ವಾಹನದ ಮಾಲೀಕರಿಗೆ ಸ್ವಾಧೀನವನ್ನು ನೀಡಿದೆನು. ಅದೇ ದಿನ ಆರೋಪಿಯವರು ನನ್ನ ಮುಂದೆ ಠಾಣೆಯಲ್ಲಿ ಹಾಜರಾಗಿದ್ದು ದಸ್ತಗಿರಿ ಪಂಚನಾಮೆಯನ್ನು ತಯಾರಿಸಿ ದಸ್ತಗಿರಿ ಮಾಡಿ ವಿಚಾರಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿದೆನು.

ಅದೇ ದಿನ ಚಾಸಾ.9 ರವರಿಂದ ಐ.ಎಂ.ವಿ ವರದಿಯನ್ನು ಪಡೆದುಕೊಂಡೆನು.ದಿಃ 22-06-2016 ರಂದು ದಯಾಕರ ಬೆಳ್ಚಾಡ್‌ರವರು ಠಾಣೆಗೆ ಹಾಜರಾಗಿ ನಮ್ಮ ತಾಯಿ ಗೋಪಿ ಬೆಳ್ಚಾಡಿಯವರು ಅಪಘಾತದಿಂದ ಆಗಿದ್ದ ಗಾಯಗಳಿಗೆ ಚಿಕಿತ್ಸೆಯು ಫಲಕಾರಿಯಾಗಿದೆ ದಿಃ 21-06-2016 ರಂದು ತೀರಿಕೊಂಡರೆಂದು ಲಿಖಿತವಾಗಿ ತಿಳಿಸಿದರು. ಸಾಕ್ಷಿಯವರು ಮುಂದುವರಿದು

ದಯಾಕರ ಬೆಳ್ಚಾಡ್ ರವರು ನೀಡಿದ ಮನವಿಯನ್ನು ಸ್ವೀಕರಿಸಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 174 ರ ಅಡಿಯಲ್ಲಿ ಪ್ರಕರಣ ದಾಖಲಿಸಿ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ದಯಾಕರ ಬೆಳ್ಚಾಡ್ ರವರು ನೀಡಿದ ಮನವಿ, ಹಾಗೂ ಅದರಲ್ಲಿರುವ ದಯಾಕರವರ ಸಹಿ ಹಾಗೂ ನನ್ನ ಸಹಿ ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 174 ರ ಅಡಿಯಲ್ಲಿ ತಯಾರಿಸಿದ ವರದಿ ಹಾಗೂ ಅದರಲ್ಲಿರುವ ಸಹಿಯನ್ನು ಸಾಕ್ಷಿಯವರು ನೋಡಿ ಗುರುತಿಸಿರುತ್ತಾರೆ. ನಂತರ ಕಡತವನ್ನು ಚಾಸಾ 11 ರವರಿಗೆ ನೀಡಿದೆನೆಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉಃ

ಪ್ರಃ 6 ಅಸಾ 6 ಹಸಮತ್ ಅಲಿಯವರು ತಮ್ಮ ಸಾಕ್ಷ್ಯದಲ್ಲಿ ದಿಃ 02-05-2016 ರಂದು ವಾಹನ ನಿರೀಕ್ಷಕರು ನೀಡಿದ ಐ ಎಂ ವಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ4 ಜಯಕರರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 18-05-2016 ರಂದು ಆದರ್ಶ ಆಸ್ಪತ್ರೆ ಯಿಂದ ಗೋಪಿಯವರಿಗೆ ಸಂಬಂದಿಸಿದ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣ ಗೊಳಿಸಿ ಭಾರತ ದಂಡ ಸಂಹಿತೆಯ ಕಲಂ 279 ಮತ್ತು 338 ಅಪರಾಧಗಳಿಗೆ ಸಂಬಂದಿಸಿದಂತೆ ಆರೋಪಿಯ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಗಾಯಾಳು ಗೋಪಿಯವರು 2 ತಿಂಗಳ ನಂತರ ಮೃತರಾಗಿದ್ದು ಮೃತರ ವಿಷಯಕ್ಕೆ ಸಂಬಂದಿಸಿದಂತೆ ಯುಡಿಆರ್ 16/2016 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತೇವೆ. ನಂತರ 20-07-2016 ರಂದು ಮೃತರ ದೇಹದ ಒಳಗಿನ ಅಂಗಾಂಗಳನ್ನು ಮಂಗಳೂರಿನ ಆರ್ ಎಫ್ ಎಸ್ ಎಲ್ ಗೆ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ದಿಃ 12-09-2016 ರಂದು ಆರ್ ಎಫ್ ಎಸ್ ಎಲ್ ರವರಿಂದ ಪರೀಕ್ಷೆಯ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಆರ್ ಅಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡ ನಂತರ ಆರ್ ಅಫ್ ಎಸ್ ಎಲ್ ವರದಿ ಹಾಗೂ ಶವ ಪರೀಕ್ಷಾ ವರದಿಯನ್ನು ಉಡುಪಿಯ ಜಿಲ್ಲಾಆಸ್ಪತ್ರೆಗೆ ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉಃ

ಪ್ರಃ 7 ಅಸಾ 7 ಡಾ.ಉಲ್ಲಾಸ್ ಶೆಟ್ಟಿಯವರು ತಮ್ಮ ಸಾಕ್ಷ್ಯದಲ್ಲಿ ದಿಃ 10-03-2016 ರಂದು ಬೆಳಿಗ್ಗೆ 1045 ರ ಸಮಯಕ್ಕೆ ಎರ್ಮಾಳು ಎಂಬಲ್ಲಿ ರಸ್ತೆ ಅಪಘಾತದಲ್ಲಿ ಗಾಯಗೊಂಡ ಹಿನ್ನಲೆಯಲ್ಲಿ ತಿಮ್ಮಪ್ಪ ರವರ ಹೆಂಡತಿ ಗೋಪಿಯವರು ಕಾಪುವಿನ ಪ್ರಶಾಂತ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಪಡೆದು ಅದೇ ದಿನ ನಮ್ಮ ಆಸ್ಪತ್ರೆಗೆ ಒಳ ರೋಗಿಯಾಗಿ ದಾಖಲಾಗಿರುತ್ತಾರೆ. ಅದೇ ದಿನ ಸಂಜೆ 6.45 ರ ಸಮಯಕ್ಕೆ ಪರೀಕ್ಷಿಸಿದಾಗ ಗೋಪಿಯವರು ಪ್ರಜ್ಞಾ ಹೀನ ಸ್ಥಿತಿಯಲ್ಲಿ ಇದ್ದು ಕೆಳಕಂಡ ಗಾಯಗಳು ಕಂಡು ಬಂದವು. 4 ಹರಿದ ಗಾಯಗಳು, ಒಂದು ತರಚಿದ ಗಾಯ, 1 ಊದಿದ ಗಾಯ ಇತ್ತು. ಗಾಯದ ಪ್ರಮಾಣ ಪತ್ರದ ಕ್ರಮ ಸಂಖ್ಯೆ 1 ರಲ್ಲಿ ನಮೂದಿಸಿದ ಗಾಯವು ತೀವ್ರ ಸ್ವರೂಪದ ಗಾಯವಾಗಿದ್ದು, ಉಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು. ಎಲ್ಲಾ ಗಾಯಗಳು ತಾಜಾ ಗಾಯಗಳಾಗಿದ್ದು ರಸ್ತೆ ಅವಗಡದಲ್ಲಿ ಸಂಭವಿಸುವ ಗಾಯಗಳೆಂದು ಅಭಿಪ್ರಾಯಪಟ್ಟು ದಿಃ 12-03-2016 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉಃ

ಪ್ರಃ 8 ಅಸಾ 8 ಡಾ. ಮದುಸೂದನ್ ನಾಯಕ್ ರವರು ತಮ್ಮ ಸಾಕ್ಷದಲ್ಲಿ ದಿಃ 22-6-2016 ರಂದು ಪಡುಬಿದ್ರೆ ಠಾಣೆಯ ಪೊಲೀಸಿನವರು ಗೋಪಿ ಬೆಟ್ಟಾಡ್ತಿ ಎನ್ನುವ ಮಹಿಳೆಯ ಶವ ಪರೀಕ್ಷೆಯನ್ನು

ಮಾಡಿ ವರದಿ ನೀಡುವಂತೆ ಮನವಿ ಸಲ್ಲಿಸಿದ್ದರು. ಮೃತ ಮಹಿಳೆಯ ದೇಹವು ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಇರಿಸಲಾಗಿತ್ತು. ಪೊಲೀಸಿನವರ ಮನವಿ ಮೇರೆಗೆ ಮಧ್ಯಾಹ್ನ 12.00 ಗಂಟೆಯಿಂದ 2.00 ಗಂಟೆಯವರೆಗೆ ಸುಮಾರು 62 ವರ್ಷದ ಗೋಪಿ ಬೆಲ್ಚಾಡ್ತಿ ಎನ್ನುವ ಮಹಿಳೆಯ ಶವ ಪರೀಕ್ಷೆಯನ್ನು ಮಾಡಿರುತ್ತೇನೆ. ಮೃತ ಮಹಿಳೆಯ ದೇಹವನ್ನು ಪರೀಕ್ಷಿಸಿದಾಗ ಆಕೆಯ ದೇಹದಿಂದ ತೆಗೆದ ಹೊಟ್ಟೆಯ ಒಳಗಿನ 2 ಅಂಗಗಳನ್ನು 1 ಬಾಟಲಿನಲ್ಲಿ, 4 ಅಂಗಗಳ ಸ್ವಲ್ಪ ಸ್ವಲ್ಪ ಭಾಗಗಳನ್ನು 2 ನೇ ಬಾಟಲಿನಲ್ಲಿ ರಕ್ತವನ್ನು 3 ನೇ ಬಾಟಲಿನಲ್ಲಿ ಹಾಗೂ ಉಪ್ಪನ್ನು 4 ನೇ ಬಾಟಲಿನಲ್ಲಿ ಹಾಕಿ ಆರ್ ಎಫ್. ಎಸ್ ಎಲ್ ಮಂಗಳೂರಿಗೆ ಕಳುಹಿಸಿಕೊಟ್ಟೆನು. ಈ ಬಗ್ಗೆ ಶವವರದಿಯಲ್ಲಿ ನಮೂದು ಮಾಡಿರುತ್ತೇನೆ. ಆರ್.ಎಫ್.ಎಸ್.ಎಲ್ ವರದಿಯನ್ನು ದಿಃ 08-09-2016 ರಂದು ಪಡೆದು ಕೊಂಡಿರುತ್ತೇನೆ. ಆರ್.ಎಫ್.ಎಸ್.ಎಲ್ ವರದಿಯನ್ನು ಪಡೆದ ನಂತರ " I am openion that death is due to Septiamia an a result of multiple bedsors" ಎಂದು ಅಭಿಪ್ರಾಯ ಪಟ್ಟು ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯವರು ಪಿ ಎಂ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ 20 ರ ಕೊನೆಯ ಹಾಳೆಯಲ್ಲಿರುವ ಅಭಿಪ್ರಾಯವನ್ನು ಸಾಕ್ಷಿಯವರು ನಾನು ಆರ್ ಎಫ್ ಎಸ್ ಎಲ್ ವರದಿ ಪಡೆದ ನಂತರ ನೀಡಿದ ಅಭಿಪ್ರಾಯ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉಃ

ಪ್ರಃ 9 ಅಸಾ 9 ವಿ. ಎಸ್ ಹಾಲಮೂರ್ತಿ ರವರು ತಮ್ಮ ಸಾಕ್ಷದಲ್ಲಿ ದಿಃ 02-08-2016 ರಂದು ಈ ಪ್ರಕರಣದ ಕಡತವನ್ನು ಹೆಚ್ಚುವರಿ ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವ ಚಾಸಾ 11 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಅದೇ ದಿನ ಹೆಚ್ಚುವರಿ ದೋಷಾರೋಪಣಾ ಪಟ್ಟಿಯಲ್ಲಿ ಕಾಣಿರುವ ಚಾ.ಸಾ.1 ಮತ್ತು ಚಾ.ಸಾ.2 ರವರ ಮರು ಹೇಳಿಕೆಯನ್ನು

ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯವರ ವಿರುದ್ಧ ಹೆಚ್ಚುವರಿ ದೋಷಾರೋಪಣಾ ಪಟ್ಟಿಯನ್ನು ಭಾರತ ದಂಡ ಸಂಹಿತೆಯ ಕಲಂ 279 ಮತ್ತು 304(ಎ)ಗೆ ಸಂಬಂದಿಸಿದಂತೆ ಸಲ್ಲಿಸಿರುತ್ತೇನೆ. ದಿಃ 23-03-2017 ರಂದು ಹೆಚ್ಚುವರಿ ದೋಷಾರೋಪಣಾ ಪಟ್ಟಿಯ ಚಾಸಾ 11 ರವರು ಮಾನ್ಯ ನ್ಯಾಯಾಲಯಕ್ಕೆ ಭಾರತ ದಂಡ ಸಂಹಿತೆಯ ಕಲಂ 279, 304(ಎ) ರೀತಿಯಲ್ಲಿ ಪ್ರಕರಣವನ್ನು ಪರಿವರ್ತಿಸಿಕೊಳ್ಳಲು ಅನುಮತಿ ನೀಡಬೇಕೆಂದು ಮನವಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉಃ

ಪ್ರಃ 10 - ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉಃ

ಪ್ರಃ 11 - ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ?

ಉಃ

ಆರೋಪಿ ನೀಡಿದ ಮೇಲಿನ ಉತ್ತರಗಳನ್ನು ದಿಃ 05-06-2024 ರಂದು ನನ್ನ ಸಮಕ್ಷಮದಲ್ಲಿ ಮಾಡಲಾಗಿದ್ದು, ದಾಖಲಿಸಿಕೊಂಡಿದ್ದು ಅವು ಸತ್ಯವೂ ಸ್ವತಂತ್ರವೂ ಆಗಿದೆ ಎಂದು ದೃಢೀಕರಿಸುತ್ತೇನೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎ.ಸಿ.ಜೆ.ಎಮ್, ಉಡುಪಿ